# ಆ ಹುಡುಗ...

■ ನಳಿನಿ ಟಿ. ಭೀಮಪ್ಪ

ಕಲೆ: ಸಂತೋಷ್ ಸಸಿಹಿತ್ಲು

ಹೆಡ್ ಪೋಸ್ಟ್ ಆಫೀಸಿಗೆ ಮಾಲಿನಿ ಸ್ಕೂಟಿಯಲ್ಲಿ ಬಂದಿಳಿದಾಗ ಸಂಜೆ ಮೂರೂವರೆ ಆಗಿತ್ತು. ಪ್ರತೀ ಸಲ ಪುಸ್ತಕ ಪೋಸ್ಟ್ ಮಾಡಲು ಬೆಳಗಿನ ಸಮಯಕ್ಕೆ ಬರುತ್ತಿದ್ದವಳು, ಇಂದು ಮಾತ್ರ ಯಾವುದೋ ಕೆಲಸ ಬಿದ್ದು ಸಮಯ ಮೀರಿತ್ತು. ರಶ್ ತುಂಬ ಇರುತ್ತದೆಯೆಂದು ಗೊತ್ತಿದ್ದರಿಂದ ಸರಸರನೆ ಒಳಗೆ ಹೋದಳು. ಕನಿಷ್ಠ ಹದಿನೈದು ಜನರು ಕ್ಯೂನಲ್ಲಿ ನಿಂತಿದ್ದರು, ಅದೂ ಕೂಡ ಒಂದೇ ಕೌಂಟರ್‌ನಲ್ಲಿ. ರಿಜಿಸ್ಟರ್ ಪೋಸ್ಟು, ಪಾರ್ಸೆಲ್ ಕಳಿಸುವುದಕ್ಕೆ ಬೆಳಗ್ಗೆಯ ಹೊತ್ತು ಮೂರು ಕೌಂಟರ್‌ಗಳಲ್ಲಿ ಕೆಲಸ ನಡೆಯುತ್ತಿದ್ದುದರಿಂದ ಸಲೀಸಾಗಿತ್ತು. ಐದು ಗಂಟೆಗೆ ಮೊದಲೇ ಎರಡು ಕೌಂಟರ್‌ಗಳಿಗೆ, ‘ಕ್ಲೋಸ್ಡ್’ ಚೀಟಿ ಅಂಟಿಸಿ ಸಿಬ್ಬಂದಿ ಬೇರೇನೋ ಕೆಲಸ ಮಾಡುತ್ತಿದ್ದರು.

ಚಾಲ್ತಿಯಲ್ಲಿದ್ದ ಒಂದೇ ಕೌಂಟರ್‌ನಲ್ಲಿ ಆಮೆಗತಿಯಲ್ಲಿ ಕ್ಯೂ ಮುಂದೆ ಹೋಗುತ್ತಿತ್ತು. ಬಹುತೇಕರದು ಮಿನಿಮಮ್ ಐದಾರು ಪಾರ್ಸೆಲ್‌ಗಳು ಇದ್ದೇ ಇತ್ತು. ಸಿಬ್ಬಂದಿ ಬಾರ್‌ಕೋಡ್ ಅಂಟಿಸಲು ಗ್ರಾಹಕರಿಗೇ ಕೊಡುತ್ತಿದ್ದರು. ಬಿಲ್ ಪ್ರಿಂಟಿಂಗ್ ಮಶೀನ್ ಬೇರೆ ಆಗಾಗ ಕೈಕೊಡುತ್ತಾ ಎಲ್ಲರ ತಾಳ್ಮೆ ಪರಿಶೀಲಿಸುತ್ತಿತ್ತು. ಮಾಲಿನಿಗಿಂತ ಮುಂದೆ ನಿಂತಿದ್ದವನೊಬ್ಬ ಕೋಪ ನೆತ್ತಿಗೇರಿ ಮತ್ತೊಂದು ಕೌಂಟರ್ ಕಡೆ ಹೋಗಿ ‘ಐದು ಗಂಟೆಗೆ ಮುಂಚೆಯೇ ಮುಚ್ಚಿ ಕೂತರೆ ಹೇಗೆ?’ ಎಂದು ಗಲಾಟೆ ಮಾಡುತ್ತಿದ್ದ.

ಅನ್ಯರಾಜ್ಯದ ಭಾಷೆ ಬರದ ಯುವ ಸಿಬ್ಬಂದಿ ಹಿಂದಿಯಲ್ಲೇ ‘ನಾವೇನು ಮಾಡೋಕಾಗುತ್ತೆ, ಇಲ್ಲಿ ಎಷ್ಟೊಂದು ಕೆಲಸ ಇದೆ, ಮುಗಿಸದಿದ್ದರೆ ಮೇಲಿನ ಅಧಿಕಾರಿಗಳು ಬೈಯುತ್ತಾರೆ’ ಎಂದು ಗರಂ ಆಗಿಯೇ ಉತ್ತರ ಕೊಟ್ಟ.

‘ನಿಮ್ಮಂತಹ ಕನ್ನಡ ಬರದವರಿಗೆಲ್ಲ ಇಲ್ಲಿ ಕೆಲಸ ಕೊಟ್ಟಿರುವುದು ನಮ್ಮ ಕರ್ಮ’ ಎಂದು ಈತನೂ ಗೊಣಗುತ್ತಲೇ ವಾಪಾಸು ಬಂದ.

ಸಿಬ್ಬಂದಿಗೆ ಮತ್ತೂ ಕೋಪ ಬಂದು ಅದೇನು ಬೈಯಲು ಬರುತ್ತಿದ್ದನೋ, ಕನ್ನಡ ಮಾತನಾಡುತ್ತಿದ್ದ ಸಹ ಸಿಬ್ಬಂದಿಗಳೆಲ್ಲ ಅವನಿಗೆ, ಹರುಕುಮುರುಕು ಹಿಂದಿಯಲ್ಲಿ ಸಮಾಧಾನಿಸುತ್ತ, ಹಿಂದಕ್ಕೆ ಎಳೆದು ಕುರ್ಚಿಯಲ್ಲಿ ಕೂರಿಸುವುದು ಕಂಡು ಬಂತು. ಗ್ರಾಹಕರ ಅವಸರವನ್ನು ಅಲ್ಲಿನ ಸಿಬ್ಬಂದಿಗಳು ಗಮನಿಸುವ ಆಸ್ಪದವೇ ಇರಲಿಲ್ಲ. ಎಲ್ಲ ಮಾತಿಗೂ ಕಿವುಡರಂತಾಗಿ, ಕ್ಯಾರೇ ಅನ್ನದೆ ‘ನಾವಿರೋದು ಹೀಗೇ ಸ್ವಾಮಿ’ ಎನ್ನುವ ಪೋಸ್ ಕೊಡುತ್ತಿದ್ದರು.

ಮಾಲಿನಿಗಿಂತ ಒಂದೆರಡು ಜನರ ಹಿಂದೆ ನಿಂತಿದ್ದ, ಕಾಲೇಜು ವಿದ್ಯಾರ್ಥಿಯಂತೆ ಕಾಣುತ್ತಿದ್ದ ಹುಡುಗನೊಬ್ಬ ಅವಳ ಬಳಿ ಬಂದು, ತುಂಬ ಚಡಪಡಿಸುತ್ತಲೇ ‘ಮೇಡಂ, ನಾನು ಕೆಲಸಕ್ಕೆ ಅರ್ಜಿ ಹಾಕಲು ಇವತ್ತೇ ಕಡೆಯ ದಿನ. ಇವರು ನೋಡಿದರೆ ಇಷ್ಟು ಲೇಟು ಮಾಡುತ್ತಿದ್ದಾರೆ. ನನ್ನ ಪಾಳಿ ಬರುವ ಹೊತ್ತಿಗೆ ಸಮಯವಾಗಿಬಿಟ್ಟರೆ, ಇಷ್ಟು ದಿನ ಕಷ್ಟಪಟ್ಟಿದ್ದೆಲ್ಲ ವೇಸ್ಟ್ ಆಗಿಬಿಡುತ್ತದೆ, ನಾನು ಮುಂದೆ ಬರಲಾ ಮೇಡಂ’ ಎಂದು ದೈನ್ಯತೆಯಿಂದ ಬಡಬಡಿಸುವವನನ್ನು ನೋಡಿ, ‘ಆಯ್ತು ನಿಂತ್ಕೋಪಾ’ ಎಂದು, ಹಿಂದೆ ನಿಂತವರ ಉರಿಗಣ್ಣನ್ನು ಲೆಕ್ಕಿಸದೆ ತನ್ನ ಮುಂದೆ ನಿಲ್ಲಲು ಹೇಳಿದಳು.

ಆ ಹುಡುಗ ಮತ್ತೆ ಮುಂದಿನವರನ್ನು ಇದೇ ರೀತಿ ಬೇಡಿಕೊಳ್ಳುತ್ತಾ ಹೇಗೋ ನಾಲ್ಕೈದು ಜನರನ್ನು ದಾಟಿ, ಆದಷ್ಟು ಬೇಗನೆ ಕೌಂಟರ್ ಮುಂದೆ ಇದ್ದುದನ್ನು ಕಂಡು, ಸದ್ಯ ಆ ಹುಡುಗನ ಕೆಲಸವಾಯ್ತಲ್ಲ, ಸಾಕು ಬಿಡು, ಎಂದು ಮಾಲಿನಿಯ ಮನಸ್ಸಿಗೆ ತುಸು ಸಮಾಧಾನವಾಯಿತು.

ತನ್ನ ಸರದಿ ಬರಲು ಕನಿಷ್ಠ ಹತ್ತು ನಿಮಿಷವಾದರೂ ಬೇಕಿದ್ದರಿಂದ, ಮೊಬೈಲ್ ಓಪನ್ ಮಾಡಿ, ಬಂದಿದ್ದ ವಾಟ್ಸಾಪ್ ಮೆಸೇಜ್‌ಗಳನ್ನು ಚೆಕ್ ಮಾಡತೊಡಗಿದಳು.

ಏನೋ ಜೋರು ಮಾತುಕತೆ ಕೇಳಿದಂತಾಗಿ, ಕಣ್ಣೆತ್ತಿ ನೋಡಿದವಳಿಗೆ, ಆ ಹುಡುಗ ಮತ್ತು ಸಿಬ್ಬಂದಿಯ ನಡುವೆ ಏನೋ ಮಾತಿನ ಚಕಮಕಿ ನಡೆಯುತ್ತಿದ್ದುದು ಕಂಡಿತು. ಚಿಲ್ಲರೆಗೋ ಅಥವಾ ಸರಿಯಾಗಿ ಫಾರ್ಮ್ ತುಂಬದಿದ್ದಕ್ಕೋ ಹೀಗೆಲ್ಲ ಜಟಾಪಟಿಗಳು ನಡೆಯುತ್ತಲೇ ಇದ್ದುದರಿಂದ ತಲೆಕೆಡಿಸಿಕೊಳ್ಳಲು ಹೋಗಲಿಲ್ಲ. ಎತ್ತರದ ಧ್ವನಿಯಲ್ಲಿ ಆ ಸಿಬ್ಬಂದಿ ‘ಐಯಾಮ್ ಸಾರಿ ಕಣಪ್ಪಾ, ಪೋಸ್ಟ್ ಆಫೀಸಿಗೆ ಬರುವಾಗ ಕ್ಯಾಶ್ ಇಟ್ಕೊಂಡು ಬರಬೇಕು ಎನ್ನುವ ಅರಿವಿರಬೇಕು, ನಾವೇನೂ ಮಾಡೋಕಾಗಲ್ಲ’ ಎಂದು ಗದರಿದ್ದು ಕೇಳಿಸಿತು. ಆ ಹುಡುಗ ಸಪ್ಪನೆಯ ಮುಖ ಮಾಡಿಕೊಂಡು ಹೋಗುವುದನ್ನು ನೋಡಿದಳು.

ಅಷ್ಟರಲ್ಲಿ ಮತ್ತೊಬ್ಬನ ಗಲಾಟೆ ಶುರುವಾಗಿತ್ತು. ‘ಎನ್ರೀ ಪ್ರಿಂಟೆಡ್ ಪುಸ್ತಕ ಕಳಿಸುವ ಕ್ಯಾಟಗರಿಯನ್ನೇ

